**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.139/2019**

**(ಚಾ.ಸಾ.6/ಪ್ರಾ.ಸಾ.6)**

ತಾಃ 21.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ನಾಗೇಂದ್ರ ಸಿಂಗ್ ಜಿ |
| ತಂದೆಯ ಹೆಸರು | ಗಂಗಾರಾಮ್ ಸಿಂಗ್ |
| ವಯಸ್ಸು | 42 ವರ್ಷ |
| ಉದ್ಯೋಗ | ಚಾಲಕ ವೃತ್ತಿ |
| ವಾಸ ಸ್ಥಳ | ಕಾಡುಗೋಡಿ |

**<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ:</u>**

ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ ಬಿಳಿ ಶರ್ಟ್ ತೊಟ್ಟಿರುವ ವ್ಯಕ್ತಿಯನ್ನು ತೋರಿಸಿ ಆತನ ಪರಿಚಯ ಇರುವುದಾಗಿ ನುಡಿದಿದ್ದು ಸದರಿ ಆರೋಪಿಯ ಹೆಸರನ್ನು ಕೇಳಲಾಗಿ ತನ್ನ ಹೆಸರು ಪವನ್ ಆಗಿರುವುದಾಗಿ ನುಡಿದಿದ್ದು ಅವರು ಈ ಪ್ರಕರಣದಲ್ಲಿ 3 ನೇ ಆರೋಪಿ ಆಗಿರುತ್ತಾರೆ. ಪೊಲೀಸರು ದಿ:20.08.2018 ರಂದು ನನ್ನನ್ನು ಠಾಣೆಗೆ ಕರೆಸಿದ್ದರು. ನಾನು ಹೋದಾಗ ಠಾಣೆಯಲ್ಲಿ 3 ಜನರು ಇದ್ದರು. ನನ್ನ ಜೊತೆ ಪೊಲೀಸ್ ಠಾಣೆಯಲ್ಲಿ ಚಾಸಾ.1

ಮತ್ತು 2 ರವರು ಬಂದಿದ್ದರು. ನಾವು ಠಾಣೆಗೆ ಹೋದಾಗ ಠಾಣೆಯಲ್ಲಿ ಶಿವುಕುಮಾರ್ ಹಾಗೂ ಮತ್ತೊಬ್ಬ ವ್ಯಕ್ತಿ ಇದ್ದರು. ಠಾಣೆಯಲ್ಲಿ ಹಾಜರಿದ್ದ ವ್ಯಕ್ತಿಗಳು ನಾವು ಕೊಲೆ ಮಾಡಿರುವುದಾಗಿ ಹೇಳಿ ಕೊಲೆ ಮಾಡಿದ ಸ್ಥಳವನ್ನು ತೋರಿಸುವುದಾಗಿ ಶವುಕುಮಾರ್ ಎಂಬ ವ್ಯಕ್ತಿ ನಮ್ಮನ್ನು ಮೊದಲಿಗೆ ವರ್ತೂರು ಪೊಲೀಸ್ ಠಾಣೆ ಎದುರು ರಸ್ತೆಯಲ್ಲಿ ಇರುವ ಮಸೀದಿ ರಸ್ತೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಸ್ಥಳಕ್ಕೆ ಹೋದಾಗ ಆ ದಿನ ಬೆಳಿಗ್ಗೆ 3.15 ಕ್ಕೆ ಗಾಡಿ ಬೇಕಾಗಿರುವುದಾಗಿ ಹೇಳಿ ಮೃತ ನಯೀಮ್ ಇವರಿಗೆ ಪೋನ್ ಮಾಡಿದ್ದು ಅವರು ಮನೆಯಿಂದ ಹೊರಗೆ ಬಂದಾಗ ಆತನಿಗೆ ರಾಡ್ ನಿಂದ ಹೊಡೆದು ಕತ್ತನ್ನು ಕುಯ್ದಿರುವುದಾಗಿ ಶಿವುಕುಮಾರ್ ಎಂಬ ವ್ಯಕ್ತಿ ತಿಳಿಸಿರುತ್ತಾರೆ. ನಂತರ ಮೃತ ದೇಹವನ್ನು ಇಟಿಯೋಸ್ ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ಚಾರ್ಮುಡಿ ಘಾಟ್ ಗೆ ಹೋಗಿರುವುದಾಗಿ ಆ ವ್ಯಕ್ತಿ ತಿಳಿಸಿರುತ್ತಾರೆ.

2. ಆ ವ್ಯಕ್ತಿ ಪೊಲೀಸರ ಮುಂದೆ ಮೊದಲಿಗೆ ಚಾರ್ಮುಡಿ ಘಾಟ್ ಕಡೆ ಹೋದಾಗ ಪೊಲೀಸರು ಬಿಡದಿದ್ದ ಕಾರಣ ಶಿರಾಡಿ ಘಾಟ್ ಕಡೆ ಹೋಗಿರುವುದಾಗಿ ತಿಳಿಸಿರುತ್ತಾರೆ. ಅಲ್ಲಿಂದ ಸ್ವಲ್ಪ ದೂರಕ್ಕೆ ಹೋದ ನಂತರ ಒಂದು ನದಿ ಹರಿಯುತ್ತಿದ್ದು ಅಲ್ಲಿ ತೂಗು ಸೇತುವೆ ಇದ್ದು ಸದರಿ ಸ್ಥಳದಲ್ಲಿ ಮೃತ ದೇಹವನ್ನು ಬೀಸಾಡಿರುವುದಾಗಿ ಆ ವ್ಯಕ್ತಿ ತಿಳಿಸಿರುತ್ತಾರೆ. ಆ ದಿನ ಬಹಳ ಸಮಯ ಆಗಿದ್ದ ಕಾರಣ ನಾವೆಲ್ಲರೂ ಕಳಸಾ ಪೊಲೀಸ್ ಠಾಣೆಗೆ ಹೋಗಿ ಪೊಲೀಸರ ವಶದಲ್ಲಿ ಇದ್ದ ಆರೋಪಿಯನ್ನು ಠಾಣೆಯಲ್ಲಿ ಬಿಟ್ಟಿದ್ದು ನಾವು ಆ ದಿನ ಕಳಸಾದಲ್ಲಿ ಉಳಿದುಕೊಂಡು ಮಾರನೇ ದಿನ ಊರಿನ ಜನರ ಸಹಾಯದಿಂದ ಹುಡುಕಿಸಿದಾಗ ಮೃತ ದೇಹ ನೀರಿನ ಕಾಲುವೆ ಮಧ್ಯದಲ್ಲಿ ಇದ್ದ

ಗಿಡದಲ್ಲಿ ಸಿಲುಕಿಕೊಂಡಿದ್ದು ಪತ್ತೆ ಆಗಿರುತ್ತದೆ. ಪೊಲೀಸರು ಒಟ್ಟು 2 ದಿವಸ ಮಹಜರ್ ಕ್ರಮ ಜರುಗಿಸಿರುತ್ತಾರೆ.

3. ಪೊಲೀಸರು ಮೃತ ದೇಹವನ್ನು ಪರಿಶೀಲಿಸಿದಾಗ ಆತನ ಪ್ಯಾಂಟ್ ನಲ್ಲಿ ಕ್ಯಾಂಟರ್ ಬೀಗದ ಒಂದು ಕೀ ಬಂಚ್ ಪತ್ತೆಯಾಗಿದ್ದು ಅದರ ಆಧಾರದ ಮೇಲೆ ಮೃತ ದೇಹವನ್ನು ಗುರುತಿಸಿರುತ್ತಾರೆ. ಪೋಲೀಸರು ಮಹಜರ್ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿದಾರರು ಮಹಜರ್ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.33 ಹಾಗೂ ಸಾಕ್ಷಿದಾರರ ಸಹಿಯನ್ನು ನಿ.ಪಿ.33(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪಂಚನಾಮೆ ಸಮಯದಲ್ಲಿ ತೆಗೆದ ನಿ.ಪಿ.12 ರಿಂದ 25 ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿದಾರರು ನಿ.ಪಿ.12 ರ ಪೋಟೋದಲ್ಲಿ ತಾನು ಹಾಗೂ ನ್ಯಾಯಾಲಯದ ಮುಂದೆ ಇರುವ ಒಬ್ಬ ಆರೋಪಿ ಇರುವುದಾಗಿ ಗುರುತಿಸಿರುತ್ತಾರೆ. ಸಾಕ್ಷಿದಾರರು ನಿ.ಪಿ.19 ರಿಂದ 25 ರಲ್ಲಿ ಇರುವ ಮೃತ ದೇಹವನ್ನು ನೋಡಿ ಗುರುತಿಸಿದ್ದು ಅದು ನವಾಜ್ ಇವರ ಮೃತ ದೇಹ ಆಗಿರುತ್ತದೆ. ಅದಕ್ಕೂ ಮೊದಲು ಪೊಲೀಸರು ನಮ್ಮನ್ನು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

ಎಸ್.ಸಿ.ನಂ.139/2019
ಚಾ.ಸಾ.6/ಪ್ರಾ.ಸಾ.6

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

4. ಪೊಲೀಸರು ನಿ.ಪಿ.33 ಮಹಜರ್ ಅನ್ನು ದಿಃ27.08.2018 ರಂದು ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭಿಸಿ ದಿಃ28.08.2018 ರಂದು ಬೆಳಿಗ್ಗೆ 10.00 ಗಂಟೆಗೆ ಮುಗಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನ್ಯಾಯಾಲಯದ ಮುಂದೆ ಹಾಜರಿರುವ 1 ಮತ್ತು 3 ನೇ ಆರೋಪಿತರು ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ. ಸದರಿ ಆರೋಪಿತರು ಕೊಲೆ ಮಾಡಿದ ನಂತರ ಬೆಂಗಳೂರಿನಿಂದ ನೆಲಮಂಗಲ ಮಾರ್ಗವಾಗಿ 5 ಟೋಲ್ ಗಳನ್ನು ದಾಟಿದ್ದು ಅವುಗಳನ್ನು ಚೆಕ್ ಮಾಡಿದಾಗ ಆರೋಪಿತರು ವಾಹನ ನೊಂದಣಿ ಸಂಖ್ಯೆಯನ್ನು ಬದಲಾಯಿಸಿರುವುದು ಕಂಡು ಬಂತು ಎಂದರೆ ಸರಿ. ಪೊಲೀಸರು ಟೋಲ್ ನಲ್ಲಿ ಇದ್ದ ಸಿಸಿ ಟಿವಿ ಅನ್ನು ಪರಿಶೀಲಿಸಿದಾಗ ಸದರಿ ವಾಹನ ಪಾಸ್ ಆಗಿರುವುದು ಕಂಡು ಬಂತು ಎಂದರೆ ಸರಿ. ನಿ.ಪಿ.33 ರಲ್ಲಿ ಈ ವಿಚಾರಗಳನ್ನು ಬರೆದಿರುತ್ತಾರೆ ಎಂದರೆ ಸರಿ. ನಿ.ಪಿ.33 ಅನ್ನು ನಾನು ಓದಿ ತಿಳಿದುಕೊಂಡ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಹೆಚ್ಚಿನ ವಿಚಾರಣೆಗಾಗಿ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಎಸ್.ಸಿ.ನಂ.139/2019
ಚಾ.ಸಾ.6/ಪ್ರಾ.ಸಾ.6

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.